ದಿನಾಂಕ 01-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 2 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಎಂ.ಹೆಚ್‌ವಕೀಲರಿಂದಃ</u>**

ನನಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ. ಸದರಿ ದಾವೆಯಲ್ಲಿ ತಕರಾರನ್ನು ಸಲ್ಲಿಸಲು ಹಾಗೂ ನನ್ನ ಮುಖ್ಯ ವಿಚಾರಣೆಯಲ್ಲಿ ಇರುವ ವಿಷಯಗಳ ಬಗ್ಗೆ ಮಾಹಿತಿ ಯಾರು ಕೊಟ್ಟಿರುತ್ತಾರೆ ಎಂದರೆ ಶಿವಪ್ಪ ರವರು ಕೊಟ್ಟಿರುತ್ತಾರೆ. ನಾನು ಸುಮಾರು 20 ವರ್ಷಗಳಿಂದ ಇನಾಂ ಯಲ್ಲಾಪುರ ಗ್ರಾಮದಲ್ಲಿ ವಾಸವಿದ್ದೇನೆ. ನನ್ನ ಮದುವೆ ಸುಮಾರು 30 ವರ್ಷಗಳ ಹಿಂದೆ ಆಗಿರುತ್ತದೆ. ಡೊಳ್ಳೇಶ್ವರ ಗ್ರಾಮದ ಶ್ರೀ ಬಾಬಣ್ಣ ಕುಮ್ಮೂರು ಎಂಬುವವರ ಜೊತೆ ನನ್ನ ಮದುವೆ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿ. ನನ್ನ ಗಂಡ ಬಾಬಣ್ಣ ರವರಿಗೆ 3 ಎಕರೆ ಆಸ್ತಿ ಹಾಗೂ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ನನಗೆ 1 ಎಕರೆ 20 ಗುಂಟೆ ಜಮೀನನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಪೋಟಗಿಯಾಗಿ ಕೊಟ್ಟಿರುತ್ತಾರೆ ಎನ್ನುತ್ತಾರೆ.

2. ಸದರಿ 1 ಎಕರೆ 20 ಗುಂಟೆ ಜಮೀನು ನನ್ನ ಹೆಸರಿನಲ್ಲಿ ಇರುತ್ತದೆ ಹಾಗೂ ಇನ್ನೂ ಸಹ ಇರುತ್ತದೆ. ಇನಾಂ ಯಲ್ಲಾಪುರ ಗ್ರಾಮದಲ್ಲಿ ಇರುವ ಮನೆಯ ಸಂಖ್ಯೆ ಹಾಗೂ ಅಳತೆ ಹೇಳಲು ಆಗುವುದಿಲ್ಲ. ಸದರಿ ಮನೆದಳದ ಆಸ್ತಿ ನನ್ನ ತಂದೆಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸುಮಾರು 20 ವರ್ಷಗಳ ಹಿಂದೆ ನನ್ನ ತಂದೆಯವರು ಜೀವಂತ ಇರುವಾಗಲೇ ಸದರಿ ಮನೆಯನ್ನು ನನ್ನ ಹೆಸರಿನಲ್ಲಿ ಮಾಡಿರುತ್ತಾರೆ ಎಂದರೆ ಸರಿ. ವಾದಿ ಹಾಗೂ 1, 2, 5 ನೇ ಪ್ರತಿವಾದಿಗಳು ತಮ್ಮ ಜಮೀನುಗಳಲ್ಲಿ ವಹಿವಾಟನ್ನು ಮಾಡುತ್ತಿದ್ದಾರೆ ಎಂದರೆ ಎಲ್ಲರೂ ಸದರಿ ಜಮೀನುಗಳಲ್ಲಿ ವಹಿವಾಟನ್ನು ಮಾಡುತ್ತಿದ್ದಾರೆ, ವಾದಿ, ಶಿವಪ್ಪ, ಚನ್ನಬಸಪ್ಪ, ಬಸಪ್ಪ, ಮರಳಸಿದ್ದಪ್ಪ, ನಾನು ಹಾಗೂ ರೇಣಮ್ಮ ರವರು ವಹಿವಾಟನ್ನು ಮಾಡುತ್ತಿದ್ದೇವೆ.

3. ನಾನು ಹಾಗೂ 4 ನೇ ಪ್ರತಿವಾದಿಯವರು ಯಾವ ಜಮೀನಿನಲ್ಲಿ ಹಾಗೂ ಎಷ್ಟು ಕ್ಷೇತ್ರದಲ್ಲಿ ವಹಿವಾಟನ್ನು ಮಾಡುತ್ತಿದ್ದೇವೆ ಎಂಬ ಬಗ್ಗೆ ನನಗೆ ಹೇಳಲು ಬರುವುದಿಲ್ಲ. ನನ್ನ ತಂದೆಯವರು ಜೀವಂತ ಇರುವಾಗಲೇ ಸದರಿ ಮನೆಯನ್ನು ನನ್ನ ಹೆಸರಿನಲ್ಲಿ ಮಾಡಿರುತ್ತಾರೆ ಅದೇ ರೀತಿ ಉಳಿದ ಮನೆ ಹಾಗೂ ಜಮೀನುಗಳನ್ನು ವಾದಿ ಹಾಗೂ 1, 2, 4, 5 ನೇ ಪ್ರತಿವಾದಿಗಳು ಹಾಗೂ ನನ್ನ ಹೆಸರಿನಲ್ಲಿ ಪ್ರತ್ಯೇಕವಾಗಿ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ನಾವು ಎಲ್ಲರೂ ಸಾಗುವಳಿಯನ್ನು ಮಾಡುತ್ತಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನಗೆ 2 ಮಕ್ಕಳು. ಅವರ ಹೆಸರು ಶಂಕ್ರಪ್ಪ ಹಾಗೂ ಮಂಜುಳಾ. ಮಂಜುಳಾ ಅವರನ್ನು 5 ನೇ ಪ್ರತಿವಾದಿಯವರಿಗೆ ಮದುವೆ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ. 5 ನೇ ಪ್ರತಿವಾದಿಯವರು ಬಾಳಂಬೀಡ ಗ್ರಾಮದಲ್ಲಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿರುತ್ತಾರೆ ಎಂದರೆ ಸರಿ. ನಮ್ಮ ತಂದೆಯವರು ಜೀವಂತ ಇರುವಾಗಲೇ ಎಲ್ಲಾರಿಗೂ ಭಾಗವನ್ನು ಕೊಟ್ಟು, ಎಲ್ಲರೂ ತಮ್ಮ ತಮ್ಮ ಹಿಸ್ಸೇಯಲ್ಲಿ ಪ್ರತ್ಯೇಕವಾಗಿ ವಹಿವಾಟಿನಲ್ಲಿ ಇದ್ದರೂ ಸಹ ನನ್ನ ಮಗಳನ್ನು 5 ನೇ ಪ್ರತಿವಾದಿಯವರಿಗೆ ಮದುವೆ ಮಾಡಿಕೊಟ್ಟಿದ್ದರಿಂದ ಅವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ಶಿವಪ್ಪ ರವರು ಹಿಸ್ಸಾವನ್ನು ಕೋರಿ ಸದರಿ ದಾವೆಯನ್ನು ನನ್ನ ಹಾಗೂ ಎಲ್ಲಾರ ಮೇಲೆ ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ಯಾವ ಯಾವ ಸರ್ವೇ ನಂಬರುಗಳು ಹಾಗೂ ಎಷ್ಟು ವಿಸ್ತೀರ್ಣ ನಮೂದಾಗಿರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ 4 ನೇ ಪ್ಯಾರಾದಲ್ಲಿ ದಿಃ 10-11-2004 ರಂದು ನಾವು ಓ ಎಸ್ ಸಂಃ 36/2004 ರಲ್ಲಿ ವಾರಸಾ ಆಧಾರದ ಮೇಲೆ ಡಿಕ್ರಿಯನ್ನು ಪಡೆದುಕೊಂಡಿರುವ ಬಗ್ಗೆ

ನಮೂದಿಸಿದ್ದು, ಸರಿ ಇರುತ್ತದೆ. ಸದರಿ ದಾಖಲೆಯನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಬಸವಣ್ಣೆಪ್ಪರವರಿಗೆ 6 ನೇ ಪ್ರತಿವಾದಿಯವರನ್ನು ಹೊರತುಪಡಿಸಿ ಇನ್ನೊಬ್ಬ ಮಗಳ ಬಸವಣ್ಣೆವ್ವ ಇರುತ್ತಾರೆ. ಸಾಕ್ಷಿಯು ಮುಂದುವರೆದು ಶಿವಪ್ಪ ರವರು ಎಲ್ಲಾ ವಿಚಾರಗಳನ್ನು ಬರೆಸಿರುತ್ತಾರೆ ಎನ್ನುತ್ತಾರೆ.

6. 2004 ನೇ ಇಸವಿಯಲ್ಲಿ ಭಾಗ ಬೇಕು ಎಂದು ನಾನು ದಾವೆಯನ್ನು ಸಲ್ಲಿಸಿರುತ್ತೇನೆ. ಸದರಿ ದಾವೆಯ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು ಶ್ರೀ ಬ್ಯಾತನಾಳ ವಕೀಲರ ಮೂಲಕ ಸಲ್ಲಿಸಿರುತ್ತೇನೆ. ಸದರಿ ದಾವೆಯಲ್ಲಿ ನನಗೆ ಆಸ್ತಿ ಬೇಕು ಎಂದು ಕೋರಿಕೊಂಡಿರುತ್ತೇನೆ. ಸದರಿ ದಾವೆ ಏನಾಗಿರುತ್ತದೆ ಎಂದು ನಾನು ನನ್ನ ವಕೀಲರಿಗೆ ವಿಚಾರಿಸಿರುತ್ತೇನೆಯೇ ಎಂದರೆ ಇನ್ನೂ ಮುಗಿದಿರುವುದಿಲ್ಲ ಎಂದು ತಿಳಿಸಿರುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-
ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ